

# ಕತೆಗಾರ *ವಿವೇಕ ಶಾನಭಾಗ* ಅವರನ್ನು ಸಂದರ್ಶಿಸಿದ್ದಾರೆ ಯುವಲೇಖಕ *ವಿಕ್ರಂ ಹತ್ವಾರ್*

ಚಿತ್ರಗಳು: ಕೃಷ್ಣಕುಮಾರ್ ಪಿ.ಎಸ್.

ಪ್ರತಿಸಲ ಸಲ ಬೆಂಗಳೂರಿನ ರಿಚ್ಮಂಡ್ ರಸ್ತೆಯ ಬಳಿಯಿರುವ ಕತೆಗಾರ ವಿವೇಕ ಶಾನಭಾಗರ ಮನೆಗೆ ಹೋಗುವಾಗಲೂ ಮುಖ್ಯ ರಸ್ತೆಯಿಂದ ಅವರ ಮನೆಯ ಕಡೆಗೆ ಕವಲೊಡೆಯುವ ಓಣಿಯು ತಪ್ಪಿಬಿಡುತ್ತದೆ. ಈ ತಿರುವಿನ ನಂತರ ಇನ್ನೊಂಚೂರು ಮುಂದೆ ಸಾಗಿದ ಮೇಲೆ ದೊರಕುವ ಬಲ ತಿರುವು ಅಂದುಕೊಳ್ಳುವಾಗಲೇ ಅದನ್ನು ದಾಟಿಯಾಗಿರುತ್ತದೆ. ಗಾಡಿಯನ್ನು ಹಿಂದಕ್ಕೆ ತಿರುಗಿಸದೆ ಅವರ ಮನೆ ತಲುಪಿದ್ದೇ ಇಲ್ಲ.

ಈ ಸಲವೂ ಹಾಗೆಯೇ ಆಯಿತು. ಅವರ ಅಪಾರ್ಟ್‌ಮೆಂಟ್ ತಲುಪಿದ ನಂತರ ಎರಡನೆಯ ಮಹಡಿಯೋ ಮೂರನೆಯ ಮಹಡಿಯೋ ಎನ್ನುವ ಗೊಂದಲವೂ ಪ್ರತಿಸಲ ಇದ್ದದ್ದೇ. ಮನೆಯ ಒಳಹೊಕ್ಕ ಕೂಡಲೇ ಒಂದು ಪ್ರಶಾಂತತೆ ಆವರಿಸುತ್ತದೆ. ಅವರ ಮನೆಯ ಒಳಗಿರುವ ಕೆಳಮಹಡಿಯು ನನ್ನೊಳಗೊಂದು ನಿಗೂಢತೆಯನ್ನು ತುಂಬುತ್ತದೆ. ಮನೆ ಒಳ ಆವರಣಗಳ ಗೌಪ್ಯತೆಯಂತಲ್ಲ ಅದು. ಈ ಮನೆಯ ಮೂಲ ವಿನ್ಯಾಸವೇ ಹೀಗಿತ್ತೇ ಅಥವಾ ಕೆಳಗಿರುವ ಮತ್ತೊಂದು ಮನೆಯನ್ನೂ ಇವರೇ ಖರೀದಿಸಿ, ಈ ಮನೆಯೊಂದಿಗೆ ಹೊಂದಿಸಿಕೊಳ್ಳಲಾಗಿದೆಯೇ ಎನ್ನುವ ಕ್ಷುಲ್ಲಕ ಅನುಮಾನ. ಈ ಸಲ ಹೋಗುವಾಗ ಅವರಲ್ಲಿ ಕೇಳುವುದಕ್ಕೆ ಕೆಲವೊಂದು ಪ್ರಶ್ನೆಗಳೂ ಇದ್ದವು.

● ನಿಮ್ಮ 'ಊರು ಭಂಗ' ಕಾದಂಬರಿಯನ್ನು ಒಂದು ರೆಫೆರೆನ್ಸ್ ಆಗಿಟ್ಟುಕೊಳ್ಳೋಣ. ನಿಮ್ಮ ಬಾಲ್ಯ, ನೀವು ಬೆಳೆದುಬಂದ ಪರಿಸರ, ನಂತರದ ಕಾರ್ಪೊರೇಟ್ ಜಗತ್ತು, ಇದೆಲ್ಲವನ್ನು ಗಮನಿಸುವಾಗ, ಸ್ವಾಭಾವಿಕವಾಗಿ ಎಲ್ಲರಲ್ಲೂ ಇರುವಂಥ 'ತೆಂಕಣಕೇರಿ ಎಫೆಕ್ಟ್' ನಿಮ್ಮಲ್ಲೂ ಇತ್ತಾ? ಅದು ಆ ಕಾದಂಬರಿಯಲ್ಲಿ ಬರುವ ಸ್ವರೂಪದ್ದೇ ಆಗಿರಬೇಕೆಂದಿಲ್ಲ. ಅಂಥದ್ದನ್ನು ನಿಮ್ಮಿಂದ ಮೀರಲು ಸಾಧ್ಯವಾಗಿದೆಯೇ? ಅಥವಾ ಆ ಪ್ರೊಸೆಸ್‌ನಲ್ಲಿದ್ದೀರ?

ಅದು ಎಲ್ಲರಲ್ಲೂ ಇರುತ್ತೆ. ಇರದುದರೆಡೆ ತುಡಿಯುವುದು. ಒಬ್ಬೊಬ್ಬರಿಗೆ ಒಂದೊಂದು ಥರ ಇರುತ್ತೆ. ಕಾರಣಗಳು ಬೇರೆ ಬೇರೆ ಇರಬಹುದು. ಕ್ಲಾಸ್, ಕ್ಯಾಸ್ಟ್, ಬದುಕಿನ ಸನ್ನಿವೇಶಗಳು ಹೀಗೆ ಆ ಒಂದು ಟ್ರಾನ್ಸಿಶನ್ ಪ್ರತಿದಿನವೂ ನಡೆಯುತ್ತಿರುತ್ತದೆ. ಮತ್ತೆ, ಯಾವುದೇ ಸಂಬಂಧದಲ್ಲಿ ಇಬ್ಬರೂ ಸರಿಸಮಾನರು ಅಂತಿರುವುದಿಲ್ಲ. ಈಕ್ವಾಲಿಟಿ ಅನ್ನುವುದು ಒಂದು ಆಲೋಚನೆ ಅಷ್ಟೇ. ಅದರೆಡೆಗೆ